**4ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು**

**ಸಿಸಿ ನಂ. 1546/2020 ಚಾಸಾಃ 2 ಪ್ರಾಸಾಃ 1**

ಸಾಕ್ಷಿದಾರರ ಹೆಸರು : ಪ್ರಕಾಶ್ ರೆಡ್ಡಿ
ತಂದೆಯ ಹೆಸರು : ಶನ್ಮುಗ ರೆಡ್ಡಿ
ವಯಸ್ಸು : 34 ವರ್ಷ
ವೃತ್ತಿ : ಖಾಸಗಿ ಕೆಲಸ
ವಾಸ : ಕಾಮಾಕ್ಷಿ ಪಾಳ್ಯ, ಬೆಂಗಳೂರು

**ಸಾಕ್ಷಿಯನ್ನು ದಿಃ 05.02.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ನನಗೆ ಚಾಸಾ-1 ಮತ್ತು ಆರೋಪಿಯ ಪರಿಚಯ ಇರುತ್ತದೆ. ನಾನು ಮತ್ತು ಆರೋಪಿಯು ಚಾಸಾ-1 ರವರಿಗೆ ತೋರಿಸಿ ಇಂಡಸ್ ಟಿಎಂಟಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆವು. ಆರೋಪಿಯು ತಮಿಳುನಾಡಿನ ಕೊಯಮತ್ತೂರು ಜಿಲ್ಲೆಯ ಸೇಲ್ಸ್ ಮ್ಯಾನೇಜರ್ ಆಗಿದ್ದರು. ಆರೋಪಿಯು ಡೀಲರ್ ಗಳಿಗೆ ವಿತರಿಸಬೇಕಾಗಿದ್ದ ಚಿನ್ನವನ್ನು ವಿತರಣೆ ಮಾಡದೆ ದುರುಪಯೋಗ ಮಾಡಿಕೊಂಡಿದ್ದರು ಎಂದು ಪ್ರಕರಣ ದಾಖಲಾಗಿರುತ್ತದೆ. ಚಾಸಾ-1 ರವರು ದೂರನ್ನು ಸಲ್ಲಿಸಿರುತ್ತಾರೆ. ಈ ಸಂಬಂಧ ಸ್ಥಳ ಪಂಚನಾಮೆ ಮಾಡಲು ಪೊಲೀಸರು ನಮ್ಮ ಕಚೇರಿಗೆ ಬಂದಿದ್ದರು. ಸದರಿ ಕಚೇರಿಯು ಬಸವನಗುಡಿ, ಎನ್.ಸ್. ರಾವ್ ರಸ್ತೆ, ನಂ.37 ರಲ್ಲಿ ಇರುತ್ತದೆ. ಸದರಿ ಕಚೇರಿಯಲ್ಲಿ ಪಂಚನಾಮೆ ಮಾಡಿ ನನ್ನ ಸಹಿ ಪಡೆದಿರುತ್ತಾರೆ. ಸಿಸಿ ನಂ.1202-2020 ರಲ್ಲಿರುವ ಮೂಲ ಪಂಚನಾಮೆಯಲ್ಲಿ ತನ್ನ ಸಹಿಯನ್ನು ಸಾಕ್ಷಿದಾರರು ನೋಡಿ ಗುರ್ತಿಸಿದ್ದು ಸದರಿ ಪಂಚನಾಮೆಯನ್ನು ಸದರಿ ಪ್ರಕರಣದಲ್ಲಿ ನಿಪಿ-1 ಎಂದು ಮತ್ತು ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿಪಿ-1ಎ ಎಂದು ಗುರ್ತಿಸಲಾಗಿರುತ್ತದೆ. ಅದನ್ನು ಈ ಪ್ರಕರಣಕ್ಕೆ ಅಳವಡಿಸಿಕೊಳ್ಳಲಾಯಿತು. ಆ ಸಮಯದಲ್ಲಿ ಚಾಸಾ-3 ರವರು ಹಾಜರಿದ್ದು ಪಂಚನಾಮೆ ಸಹಿ ಮಾಡಿರುತ್ತಾರೆ. ಸದರಿ ಪಂಚನಾಮೆಯನ್ನು 2019ನೇ ಸಾಲಿನಲ್ಲಿ ಬರೆಯಲಾಗಿರುತ್ತದೆ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಎಂ.ಪಿ. ವಕೀಲರಿಂದಃ</u>**

ಪೊಲೀಸರು ಪಂಚನಾಮೆಗೆ ಸಾಕ್ಷಿಯಾಗುವಂತೆ ನಮಗೆ ನೋಟೀಸು ಕೊಟ್ಟಿರುವುದಿಲ್ಲ. ಆ ದಿನ ನಮ್ಮ ಕಚೇರಿಗೆ ಬಂದಿದ್ದ ಪೊಲೀಸರ ಹೆಸರನ್ನು ನನಗೆ ಹೇಳಲು ಆಗುವುದಿಲ್ಲ. ಪೊಲೀಸ್ ಅಧಿಕಾರಿಯ ಹೆಸರು ನನಗೆ ಗೊತ್ತಿಲ್ಲ. ಆ ದಿನ ಪೊಲೀಸ್ ನಿರೀಕ್ಷಕರು ಬಂದಿರುವುದಿಲ್ಲ. ಪಂಚನಾಮೆ ಮಾಡಿದ ಸಮಯ ನೆನಪಿರುವುದಿಲ್ಲ. ಸುಮಾರು ಮದ್ಯಾಹ್ನದ ಸಮಯದಲ್ಲಿ ಬರೆದಿದ್ದರು. ಪೊಲೀಸರು ಪಂಚನಾಮೆಯನ್ನು ಕಚೇರಿಯಲ್ಲಿಯೇ ಬರೆದಿರುತ್ತಾರೆ. ನಾನು 2014 ರಿಂದ ಚಾಸಾ-1 ರವರ ಬಳಿ ಕೆಲಸ ನಿರ್ವಹಿಸುತ್ತಿದ್ದೇನೆ. ಚಾಸಾ-1 ರವರು ಹೇಳಿದಂತೆ ನಾವು ಕೇಳಬೇಕು ಎಂದರೆ ಸರಿ. ಕಚೇರಿಯ ಅಳತೆ ಸುಮಾರು 12 ಇಂಟು 20 ಅಡಿ ಬರುತ್ತದೆ. ನನಗೆ ಸದರಿ ಕಚೇರಿಯ ಚಕ್ಕುಬಂಧಿ ಹೇಳಲು ಆಗುವುದಿಲ್ಲ. ನಾನು ನಿಪಿ-1 ಪಂಚನಾಮೆಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೂ ನಮ್ಮ ಕಂಪನಿಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**4ನೇ ಎ.ಸಿ.ಜೆ.ಎಂ.ನ್ಯಾ.,**